## ಪ್ರೈಮ್ ಟೈಮ್‌ನಿಂದ ಕ್ರೈಮ್ ಟೈಮಿಗೆ

ಈ ಮೊದಲು ರಾತ್ರಿ 10 ಗಂಟೆಯ ನಂತರ 'ಕ್ರೈಮ್ ನ್ಯೂಸ್' ಎಂಬ ಕಾರ್ಯಕ್ರಮದಲ್ಲಿ ಅಪರಾಧ ಸುದ್ದಿಯ ಜಗತ್ತು ಬಿತ್ತರವಾಗುತ್ತಿತ್ತು. ಅದರಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ವೀಕ್ಷಕರ ಮೈನವಿರೇಳುವಂತೆ ವಿಸ್ತೃತವಾಗಿ ಪ್ರಸಾರ ಮಾಡುತ್ತಿದ್ದರು. ಆ ಕಾರ್ಯಕ್ರಮಗಳು ನಿಂತಿವೆ. ಆದರೆ ಇತ್ತೀಚೆಗೆ ಸುದ್ದಿವಾಹಿನಿಗಳ 'ಪ್ರೈಮ್ ನ್ಯೂಸ್'ನಲ್ಲಿ ಕ್ರೈಮ್‌ಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ. ಹೆಚ್ಚಿನ ಸಮಯ ಅದೇ ಕಬಳಿಸುವುದನ್ನು ನೋಡಿದರೆ, ಕ್ರೈಮ್ ನ್ಯೂಸ್‌ಗಾಗಿ ಪ್ರತ್ಯೇಕ ವಾಹಿನಿ ಅಥವಾ ಹಿಂದಿನಂತೆ ಪ್ರತ್ಯೇಕ ಸ್ಲಾಟ್ ನೀಡಬೇಕೇನೋ ಎನಿಸುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ಹೊಸ ಪ್ರಯೋಗ ಇಲ್ಲವೇ ಇಲ್ಲ

ಚಂದನ ಟೀವಿಯನ್ನು ಹೊರತುಪಡಿಸಿ ಬೇರೆ ಯಾವುದೇ ಕನ್ನಡ ವಾಹಿನಿಗಳನ್ನು ನೋಡಿದರೂ ಅವರು ರೂಪಿಸುವ ಕಾರ್ಯಕ್ರಮಗಳಲ್ಲಿ ಅಭಿರುಚಿಯ ಕೊರತೆ ಕಾಣಿಸುತ್ತದೆ. ದಿನದ 24 ಗಂಟೆಯೂ ಅದೇ ಸಮಸ್ಯೆ ಎದ್ದು ಕಾಣಿಸುತ್ತದೆ.

ಮ್ಯೂಸಿಕ್ ಮತ್ತು ಸಿನಿಮಾ ವಾಹಿನಿಗಳ ಹಣೆಬರಹವೂ ಇಷ್ಟೇ. 'ಹಾಡಿದ್ದೇ ಹಾಡೋ ಕಿಸಿ ಬಾಯಿ ದಾಸ' ಎಂಬಂತೆ ಮೂರೂ ಮುಕ್ಕಾಲು ಸಿನಿಮಾಗಳ ಹಾಡುಗಳನ್ನೇ ದಿನ ಪೂರ್ತಿ ಪ್ರಸಾರ ಮಾಡಿದಂತೆ, ಮತ್ತೆ ಮತ್ತೆ ಅವೇ ಸಿನಿಮಾಗಳ ಮರು ಪ್ರಸಾರ ಮಾಡುತ್ತಿರುತ್ತಾರೆ. ಜಾನಪದಗೀತೆ, ಭಾವಗೀತೆ, ಸಂಗೀತ ಕಛೇರಿ ಕಾರ್ಯಕ್ರಮಗಳನ್ನು ನಡೆಸಿಕೊಡುವ ಪ್ರಯತ್ನವನ್ನು ಮಾಡುವುದೇ ಇಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಇಂತಹ ತಾಯಿ ಎಲ್ಲರಿಗೂ ಸಿಗಲಿ

ಚಂದನದ 'ವಾರದ ಅತಿಥಿ' ಕಾರ್ಯಕ್ರಮದಲ್ಲಿ ಪ್ರೇಮಾ ಧನರಾಜ್ ಅವರ ಸಂದರ್ಶನ ತುಂಬಾ ಚೆನ್ನಾಗಿ ಮೂಡಿಬಂದಿದೆ. ಮಹಿಳೆಯರ ಸಾಧನೆಗೆ ಅಮ್ಮನ ಪ್ರೇರಣೆ ಮತ್ತು ಮಾರ್ಗದರ್ಶನ ಈ ಮಟ್ಟಿಗೆ ಬಲ ಕೊಡುತ್ತದೆ ಅಂತ ಅರವತ್ತರ ವಯಸ್ಸಿನ ನನಗೆ ಗೊತ್ತಾಗಲಿಲ್ಲ. ಪ್ರೇಮಾ ಅವರಿಗೂ ಹಾಗೂ ಅವರ ತಾಯಿಗೂ ಅಭಿನಂದನೆಗಳು. ಇಂತಹ ತಾಯಿ ಎಲ್ಲರಿಗೂ ಸಿಗಲಿ.

—ಧನಲಕ್ಷ್ಮಿ ಪುರುಷೋತ್ತಮ್ ರಾವ್, ಕೋಲಾರ್

ವಾರದ ಪತ್ರ

## ಸುದ್ದಿ ವಾಹಿನಿ: ಘನಘೋರ, ಭೀಕರ, ಶಾಕಿಂಗ್

ರಾಜಕೀಯ ಪಕ್ಷಗಳಿಗೆ ತಕ್ಕಂತೆ ಸುದ್ದಿ ವಾಹಿನಿಗಳಲ್ಲೂ ರಾಜಕೀಯ ಇರುವುದು ಕಾಣುತ್ತಿದೆ. ಒಂದು ಬಣ ಏಕಪಕ್ಷೀಯವಾಗಿ ತಮ್ಮ ವಾಹಿನಿಯಲ್ಲಿ ಒಂದು ಪಕ್ಷದವರನ್ನೇ ಬೆಂಬಲಿಸುತ್ತಾರೆ. ತಮ್ಮ ನೆಚ್ಚಿನ ಪಕ್ಷದವರ ಬಗ್ಗೆ ಸಂಪೂರ್ಣವಾಗಿ ಸಕಾರಾತ್ಮಕ ಸುದ್ದಿಗಳನ್ನು ಮಾತ್ರ ಬಿತ್ತರಿಸುತ್ತಾರೆ. ಅದೇ ಪಕ್ಷದವರು ಯಾವುದಾದರೂ ಹಗರಣಗಳಲ್ಲಿ ಸಿಲುಕಿ ಹಾಕಿಕೊಂಡಿದ್ದರೆ ಕಾಟಾಚಾರಕ್ಕೆ ಸುದ್ದಿ ಮಾಡುವುದಿಲ್ಲ. ಬೇರೆ ವಾಹಿನಿಯಲ್ಲಿ ಅದು ದೊಡ್ಡ ಸುದ್ದಿಯಾಗಿರುತ್ತದೆ.

ಇನ್ನೊಂದು ಬಣದ ವಾಹಿನಿಗಳು ತಾವು ಬೆಂಬಲಿಸುವ ಪಕ್ಷದವರು ಏನೇ ಮಾಡಿದರೂ ಅದಕ್ಕೆ ರೋಚಕತೆಯನ್ನು ತುಂಬಿ, ರೆಕ್ಕೆ, ಪುಕ್ಕ ಸಿಕ್ಕಿಸಿ ವೈಭವೀಕರಿಸುತ್ತಾರೆ ಮತ್ತು ವಿರೋಧ ಪಕ್ಷಗಳನ್ನು ಹುಡುಕಿ ಹುಡುಕಿ ಹೀಗಳೆಯುತ್ತಾರೆ.

ಹೀಗಿರುವಾಗ ಯಾವುದಾದರೂ ಮಹತ್ತರ ಅಥವಾ ಭೀಕರ ಘಟನೆ ನಡೆದರೆ (ರೇಣುಕಾಸ್ವಾಮಿ ಕೊಲೆ ಪ್ರಕರಣ) ವಾರಪೂರ್ತಿ ಅದೇ ಸುದ್ದಿ. ಅವರ ಭಾಷೆಯಲ್ಲೇ ಹೇಳಬೇಕೆಂದರೆ 'ಘನಘೋರ', 'ರಣಭೀಕರ', 'ಭೀಭತ್ಸ', 'ಶಾಕಿಂಗ್' ಸುದ್ದಿಗಳಾಗಿ ರೂಪಾಂತರಗೊಳ್ಳುತ್ತವೆ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ನೆರೆಮನೆಯ ಆಪ್ತ ಕನ್ನಡತಿ!

ಕನ್ನಡದ ಜನಪ್ರಿಯ ನಿರೂಪಕಿ, ನಟಿ, ಮಜಾ ಟಾಕೀಸಿನ 'ವನ್ ಆಂಡ್ ಓನ್ಲಿ' ವರಲಕ್ಷ್ಮಿ ಎನಿಸಿಕೊಂಡಿದ್ದ ಅಪರ್ಣಾ ನಿಧನದ ಸುದ್ದಿ ಕೇಳಿ ನನ್ನ ಕಂಗಳಿಂದ ಅಶ್ರುಧಾರೆ ನನಗರಿವಿಲ್ಲದೇ ಸುರಿದವು.

ಅಪ್ಪಟ ಕನ್ನಡದ ಆಕೆಯ ಮಾತುಗಳನ್ನು ಆಲಿಸುತ್ತಿದ್ದಾಗ ಹೊರನಾಡ ಕನ್ನಡಿಗನಾದ ನನಗೆ ರೋಮಾಂಚನ ಅನ್ನಿಸುತ್ತಿತ್ತು. ಆಕೆಯ ಕಾರ್ಯಕ್ರಮ ನೋಡುತ್ತಿದ್ದಾಗ ಕರ್ನಾಟಕದಲ್ಲೇ ಇರುವಂತೆ ಭಾಸವಾಗುತ್ತಿತ್ತು.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ವಿಷಾದದ ಹೊತ್ತಲ್ಲಿ ಚರ್ಚೆಯ ವಿಪರ್ಯಾಸ

ನಿರೂಪಕಿ ಅಪರ್ಣಾ ಅವರ ಅಕಾಲಿಕ ಸಾವು ತುಂಬಲಾರದ ನಷ್ಟವೇ ಸರಿ. ಆಕೆಯ ಸಾವಿಗೆ ದೇಶ ವಿದೇಶಗಳಲ್ಲಿರುವ ಅಭಿಮಾನಿಗಳಿಂದ ಶ್ರದ್ಧಾಂಜಲಿಯ ಮಹಾಪೂರ ಹರಿದು ಬರುತ್ತಿದೆ. ಆದರೆ ಕೆಲ ಟೀವಿಗಳಲ್ಲಿ ಆಕೆಯ ವೈಯಕ್ತಿಕ ಬದುಕಿನ ವಿಚಾರವನ್ನು ಆಡಿಕೊಳ್ಳುತ್ತಿರುವುದು ವಿಪರ್ಯಾಸವೇ ಸರಿ. ವಿಷಾದದ ಗಳಿಗೆಯಲ್ಲಿ ಇಂತಹ ಅನಗತ್ಯ ಚರ್ಚೆಗೆ ಕಡಿವಾಣ ಅಗತ್ಯ.

—ನಳಿನಿ ಮಾಗಲ್

## ಸಕಾರಾತ್ಮಕ ಪಾತ್ರವೂ ಇರಲಿ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿಯಲ್ಲಿ ಕಾಲೇಜಿನ ಓದುವ ಹುಡುಗಿಯಿಂದ ಹಿರಿಯ ಮಹಿಳೆಯವರೆಗೆ ದುರ್ಗುಣಗಳ ಹೆಣ್ಣುಮಕ್ಕಳ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಯಾಕೆ ಹೀಗೆ? ಇಷ್ಟೊಂದು ಹೆಣ್ಣುಮಕ್ಕಳ ಅವಶ್ಯಕತೆ ಇದೆಯೆ? ಇದರ ಹಿಂದಿನ ಉದ್ದೇಶ ಮತ್ತು ಸಂದೇಶ ಏನು? ಸಕಾರಾತ್ಮಕ ಸಂದೇಶ ಸಾರುವ ಪಾತ್ರಗಳ ಮೂಲಕ ಕಥೆ ಹೇಳುವ ಕಲೆ ಒಳ್ಳೆಯದು.

—ಕಮಲಾ ರಾವ್, ಬೆಂಗಳೂರು

## ಇಂಪು-ತಂಪಿಗೆ ಚಂದನ

ನಮ್ಮ ಚಂದದ ಚಂದನ ವಾಹಿನಿಯ 'ಗಾನಗರಡಿ' ಕಾರ್ಯಕ್ರಮ ಕಿವಿಗೆ ಇಂಪು, ಮನಕ್ಕೆ ತಂಪು. ದೇವಾನಂದ್ ವರಪ್ರಸಾದ್ ಅವರ ಗಾಯನ ಮತ್ತು ವಿವರಣೆ ಮನಮೋಹಕವಾಗಿತ್ತು. ಅಬ್ಬರವಿಲ್ಲದೆ ಇಂತಹ ಕಾರ್ಯಕ್ರಮ ನೀಡಲು ಚಂದನ ವಾಹಿನಿಗೆ ಮಾತ್ರ ಸಾಧ್ಯ.

—ಜಗದೀಶ ಬಿ. ಹೊಸೂರು, ಮೈಸೂರು

## ಕಥೆಗೆ ಸಮಯ ಸಾಕಾಗಲ್ಲ



ಸ್ಟಾರ್ ಸುವರ್ಣದ 'ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ' ಮತ್ತು 'ಶ್ರೀ ಯಡಿಯೂರ ಸಿದ್ದಲಿಂಗೇಶ್ವರ' ಧಾರಾವಾಹಿಗಳೆರಡೂ ಚೆನ್ನಾಗಿ ಮೂಡಿಬರುತ್ತಿವೆ. ತಲಾ ಅರ್ಧ ಗಂಟೆ ಕಥೆಯನ್ನು ಹೇಳಲು ಸಾಕಾಗುತ್ತಿಲ್ಲ ಎಂದೆನಿಸುತ್ತಿದೆ. ಹಾಗಾಗಿ ಈ ಎರಡು ಧಾರಾವಾಹಿಗಳಿಗೆ ಒಂದು ಗಂಟೆಯ ಅವಧಿ ಅಗತ್ಯ. ನಿತ್ಯದ ಜಾಹೀರಾತಿನ ನಡುವೆ ಕಥೆಗೆ ಸಿಗುವ ಅವಕಾಶ ತುಂಬ ಕಡಿಮೆಯಾಗುತ್ತದೆ.

ಎರಡೂ ಭಕ್ತಿ ಪ್ರಧಾನವಾದ ಕಥೆಯನ್ನು ಹೊಂದಿದ್ದು ನಮ್ಮಲ್ಲಿ ಅಧ್ಯಾತ್ಮ ಮತ್ತು ಸನ್ಮಾರ್ಗ ಚಿಂತನೆಯನ್ನು ಇವು ಮೂಡಿಸುತ್ತಿವೆ. ಪೌರಾಣಿಕ ಕಥೆಗೆ ತಕ್ಕಂತೆ ಗ್ರಾಫಿಕ್ ವಿನ್ಯಾಸ, ನಟನೆಯ ವೈಭವ ನಿಜಕ್ಕೂ ನೋಡುಗರಲ್ಲಿ ಆನಂದವನ್ನು ಉಂಟುಮಾಡುತ್ತದೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ